## *Form No.4.*

## *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC : 4/2025**

**CW2**

**PW2**

| | | |
|---|---|---|
| ಸಾಕ್ಷಿಯ ಹೆಸರು | ಃ | ರಮೇಶ್ |
| ತಂದೆ ಹೆಸರು | ಃ | ಜೀತು ಶೆಟ್ಟಿ |
| ಪ್ರಾಯ | ಃ | 60 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ | ಃ | ಕೆರ್ವಾಶೆ, ಕಾರ್ಕಳ |

ದಿನಾಂಕ **: 04.07.2025** ರಂದು ಪಿಡಬ್ಲ್ಯೂ - 2/ಸಿಡಬ್ಲ್ಯೂ - 2 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಆರೋಪಿತರ ಪರಿಚಯವಿದೆ. ಈಗ ನನಗೆ ನಿಪಿ - 1 ಮತ್ತು ನಿಪಿ - 4 ರಲ್ಲಿ ನನ್ನ ಸಹಿ ಇರುತ್ತದೆ. ನನ್ನ ಸಹಿಗಳನ್ನು ಕ್ರಮವಾಗಿ ನಿಪಿ - 1(ಬಿ) ಮತ್ತು ನಿಪಿ - 4(ಬಿ) ಎಂದು ಗುರುತಿಸಲಾಯಿತು. ನಿಪಿ - 3 ಮತ್ತು ನಿಪಿ - 5 ಫೋಟೋಗಳಲ್ಲಿ ನಾನು

ಇದ್ದೇನೆ. ಸಹಿಗಳನ್ನು ಯಾವಾಗ, ಎಲ್ಲಿ ಮಾಡಿದ್ದೇನೆ ಎಂದು ನನಗೆ ತಿಳಿದಿಲ್ಲ. ನಿಪಿ - 3 ಮತ್ತು ನಿಪಿ - 5 ನ್ನು ಯಾವ ಕಾರಣದಿಂದ ತೆಗೆಯಲಾಗಿದೆ ಎಂದು ನನಗೆ ತಿಳಿದಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಹಿರಿಯ.ಸ.ಸ.ಅ. ರವರು ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ</u> ಪಿ.ಎ.ಎಸ್. 1 ನೇ ಆರೋಪಿತರ ಪರ ವಕೀಲರಿಂದಃ

ದಿಃ 06.04.2024 ರಂದು ಪೋಲೀಸರು ನನ್ನನ್ನು ಮತ್ತು ಚಾಸಾ 3 ರವನ್ನು ಕೆರ್ವಾಶೆ ಗ್ರಾಮದ ಕೊಡಮಣಿತ್ತಾಯ ಬ್ರಹ್ಮ ಬೈದರ್ಕಳ ಗರಡಿ ಬಳಿ ಕರೆಸಿ, ನಮ್ಮ ಸಮಕ್ಷಮ ಕೆಎ 20 ಸಿ 3207 407 ಟೆಂಪೋ ಮತ್ತು ಅದರಲ್ಲಿದ್ದ ಮರಳು, ಮೂರು ರಬ್ಬರ್ ಬುಟ್ಟಿ ಹಾಗೂ ಮೂರು ಕಬ್ಬಿಣದ ಹಾರೆ ಮತ್ತು 3 ಜನ ಆರೋಪಿತರನ್ನು ನನ್ನ ಮತ್ತು ಚಾಸಾ 3 ರವರ ಸಮಕ್ಷಮ ನಿಪಿ - 3 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿ. ಅದೇ ದಿನ 1 ನೇ ಆರೋಪಿ ತಾವು ಮರಳು ತೆಗೆದ ಜಾಗ ಎಂದು ತೋರಿಸಲಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ನಿಪಿ - 4 ರಂತೆ ಮಹಜರು ಮಾಡಿ, ನಿಪಿ - 5 ರಂತೆ ಫೋಟೋ ತೆಗೆದಿರುತ್ತಾರೆ

ಎಂದರೆ , ತೆಗೆದಿರುಬಹುದು ಆದರೆ ಯಾಕೆ ತೆಗೆದಿರುತ್ತಾರೆ ಎಂದು ನನಗೆ ತಿಳಿದಿಲ್ಲ. ಇವತ್ತು ಆರೋಪಿತರು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ನಾನು ಆರೋಪಿತರು ಹೇಳಿಕೊಟ್ಟಂತೆ ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ತಿಳಿದಿದ್ದರೂ ಸಹಾ ನಾನು ನನ್ನ ಸಮಕ್ಷಮ ಮಹಜರು ಮಾಡಿ ಫೊಟೋಗಳನ್ನು ತೆಗೆದಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.